ಕೊಡುವುದಿಲ್ಲ. ಈ ರೀತಿಯಲ್ಲಿ ಇಡೀ ರಾಜ್ಯದಲ್ಲಿ ೧೦ ಶಾಲೆಗಳಿಗೆ ಮಾತ್ರ ಕೊಟ್ಟಿದ್ದೇವೆ. ಮಂತ್ರಿ ಮೈಸೂರಿನಲ್ಲಿ ೩ಕ್ಕೆ ಕೊಟ್ಟಿದ್ದೇವೆ. ಕೆಲವು ಅರ್ಜಿಗಳು ಪರಿಶೀಲನಾ ಹಂತದಲ್ಲಿ ಇವೆ. ಕೆಲವರು ದಾಖಲಾತಿಗಳನ್ನು ಸರಿಯಾಗಿ ಒದಗಿಸಿರುವುದಿಲ್ಲ. ಕೆಲವು ಕಡೆ ಕಂಡೀಷನ್ಸ್ ಒಪ್ಪಿದ್ದೀರಾ ಎಂದು ಕೇಳಿದ್ದೇವೆ. ಅದಕ್ಕೆ ವಿವರ ಇನ್ನು ಒದಗಿಸಿಲ್ಲ. ಇವನ್ನೆಲ್ಲಾ ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ ನಾವು ತೀರ್ಮಾನ ಮಾಡುತ್ತೇವೆ.

ಶ್ರೀ ಜಿ. ರಾಜೂಗೌಡ.—ಮೈಸೂರು ಜಿಲ್ಲೆಯಲ್ಲಿ ಕೊಟ್ಟಿರುವ ೩ ಶಾಲೆಗಳು ಯಾವುವು? ಯಾವುದೇ ಒಂದು ಇಂಗ್ಲೀಷ್ ಶಾಲೆಗೆ ಅನುಮತಿ ಕೊಡುವುದಿಲ್ಲವೆಂದು ಸರ್ಕಾರ ಹಿಂದೆ ಹೇಳಿದ್ದು ನಿಜವೇ? ಹಾಗಿದ್ದರೆ ಅದನ್ನು ಕೈಬಿಟ್ಟಿದ್ದೀರಾ? ಯಾರ ಒತ್ತಾಯಕ್ಕೆ ಮಣಿದು, ಯಾರನ್ನು ತೃಪ್ತಿ ಪಡಿಸುವುದಕ್ಕೆ ಇದನ್ನು ಅನುಸರಿಸಿದ್ದೀರಿ?

ಶ್ರೀ ಡಿ. ಮಂಜುನಾಥ್.—ಯಾರನ್ನೂ ತೃಪ್ತಿಪಡಿಸುವುದಕ್ಕೆ ಎಂದು ಅಲ್ಲ. ಈ ಸದನದಲ್ಲೇ ಶಿಕ್ಷಣದ ಬೇಡಿಕೆ ಮೇಲೆ ಚರ್ಚೆ ನಡೆದಾಗ ನಾನು ಉತ್ತರ ಹೇಳಿದ್ದೇನೆ. ಹೊಸದಾಗಿ ಇಂಗ್ಲೀಷ್ ಶಾಲೆಗಳನ್ನು ಕೊಡುವ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಂಟಿಯನ್ನು ಮಾಡಿದ್ದೇವೆ. ಅದರ ಬಗ್ಗೆ ಯಾವುದೇ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಂಡಿಲ್ಲ. ಒಂದನೆಯ ತರಗತಿಯಿಂದ ಏಳನೆಯ ತರಗತಿಯವರೆಗೆ ನಡೆಸಿದ್ದರೆ ಅಂತಹವಕ್ಕೆ ೮ನೇ ತರಗತಿ ಅನುಮತಿ ಕೊಡಬೇಕು ಎಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಅದರ ಪ್ರಕಾರ ಕೆಲಸ ಪ್ರೊಸೆಸ್ ಆಗಿದೆ. ಈಗಾಗಲೇ ಕೊಟ್ಟಿರುವ ೧೦ ಅರ್ಜಿಗಳು ಏನಿವೆ ಅವುಗಳನ್ನು ಏಲೇ ಮಾಡಬೇಕೆಂದು ಅವುಗಳನ್ನು ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ಜಿ. ರಾಜೂಗೌಡ.—ಅನುಮತಿಯನ್ನು ಕೊಡುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಅಧ್ಯಕ್ಷರು.—ತಾವು ಎಷ್ಟು ಸಾರಿ ಸಪ್ಲಿಮೆಂಟರಿ ಹಾಕುವುದು? ಮುಂದಿನ ಪ್ರಶ್ನೆ ವಿನಯಕುಮಾರ್ ಸೊರಕೆಯವರು

ಪುತ್ತೂರಿಗೆ ಉಪ–ರಸ್ತೆ (ಬೈಪಾಸ್–ರಸ್ತೆ)

೯೪೧. ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).— ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪುತ್ತೂರು ಬೈಪಾಸ್ ರಸ್ತೆಯ ಕಾಮಗಾರಿ ಯಾವ ಹಂತದಲ್ಲಿದೆ ;

ಆ) ಪುತ್ತೂರಿಂ ಬೈಪಾಸ್ ರಸ್ತೆಯ ಕಾಮಗಾರಿಯನ್ನು ಸರಕಾರದವರು ಎಷ್ಟು ವರ್ಷಗಳಲ್ಲಿ ಪೂರ್ತಿ ಮಾಡುವ ಯೋಜನೆ ಇದೆ ;

ಇ) ೧೯೮೭-೮೮ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಗೆ ಸರಕಾರವು ಹೆಚ್ಚಿನ ಆದ್ಯತೆ ನೀಡುವುದೆ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಈ ರಸ್ತೆಗೆ ಬೇಕಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕ್ರಮ ನಡೆಯುತ್ತಿದೆ.

ಆ) ಪುತ್ತೂರು ಬೈಪಾಸ್ ರಸ್ತೆಗೆ ಬೇಕಾದ ಜಮೀನು ಸರ್ಕಾರದ ವಶಕ್ಕೆ ಬಂದ ಮೇಲೆ ರಸ್ತೆ ನಿರ್ಮಾಣಕ್ಕೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಇ) ೧೯೮೭–೮೮ನೇ ಆಯವ್ಯಯದಲ್ಲಿ ಈ ಕಾಮಗಾರಿಯ ಭೂ ಸ್ವಾಧೀನಕ್ಕೆ ಹತ್ತು ಲಕ್ಷ ರೂ.ಗಳು ಅನುದಾನವನ್ನು ಒದಗಿಸಲಾಗಿದೆ.

ಇದರ ಬಗ್ಗೆ ಇನ್ನು ಅಡಿಶನಲ್ ಇನ್‌ಫರ್ಮೇಶನ್‌ನ್ನು ನಾವು ಕೊಡುವುದಾದರೆ, ೨೦ ಲಕ್ಷ ರೂಪಾಯಿಗಳನ್ನು ಭೂ ಸ್ವಾಧೀನ ಮಾಡಿಕೊಳ್ಳಲಿಕ್ಕೆ ದಿನಾಂಕ ೧೩–೩–೮೭ರಂದು ನಿರ್ಣಯ

ತೆಗೆದುಕೊಳ್ಳಲಾಗಿದೆ. ಅದರಲ್ಲಿ ಈಗಾಗಲೇ ೧೦ ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಇಟ್ಟಿದ್ದೇವೆ. ಭೂ ಸ್ವಾಧೀನ ಮಾಡಿಕೊಳ್ಳಲಿಕ್ಕೆ ಏನೇನು ಆಬ್ಜೆಕ್ಷನ್ ಬರುತ್ತದೆ. ಅದನ್ನು ನೋಡಿಕೊಂಡು ಕೆಲಸ ಪ್ರಾರಂಭ ಮಾಡುತ್ತೇವೆ. ಮಾನ್ಯ ಸದಸ್ಯರು ಭೂ ಸ್ವಾಧೀನ ಮಾಡಿಕೊಳ್ಳುವಾಗ ಮುಂದೆ ಬಂದು ರೈತರ ಮನವೊಲಿಸಿ ಭೂಮಿಯನ್ನು ಕೊಡಿಸಿಕೊಡುತ್ತೇನೆಂದರೆ ಕೆಲಸ ಶುರು ಮಾಡಲಿಕ್ಕೆ ತೊಂದರೆಯೇನೂ ಇಲ್ಲ. ಪ್ರಮುಖವಾಗಿರತಕ್ಕ ವಾಸ್ತವಾಂಶ ಇಷ್ಟೆ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಮುಖ್ಯಮಂತ್ರಿಗಳು ಬೈಪಾಸ್ ರಸ್ತೆ ಮಾಡಲಿಕ್ಕೆ ಭೂಸ್ವಾಧೀನ ಮಾಡಿಕೊಳ್ಳಲಿಕ್ಕೆ ಹಣವನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಕಳೆದ ಸಲ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಲಾಗಿತ್ತು. ಬೈಪಾಸ್ ರಸ್ತೆ ಮಾಡಲಿಕ್ಕೆ ಭೂ ಸ್ವಾಧೀನ ಮಾಡಿಕೊಳ್ಳಲಿಕ್ಕೆ ರಾಜೀ ಪಂಚಾಯಿತಿ ಮಾಡಿ ಭೂಮಿಯನ್ನು ಕೊಡಿಸಿದರೆ ಅಲ್ಲಿ ಕೆಲಸ ಶುರು ಮಾಡೋಣವೆನ್ನುವ ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಈ ವರ್ಷ ಭೂ ಸ್ವಾಧೀನ ಮಾಡಿಕೊಳ್ಳಲಿಕ್ಕೆ ೧೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ರಾಜೀ ಪಂಚಾಯತಿ ಮೂಲಕ ಜನರು ಭೂಮಿಯನ್ನು ಕೊಡುವುದಕ್ಕೆ ಮುಂದೆ ಬಂದರೆ ಆ ಕೆಲಸವನ್ನು ಕೂಡಲೇ ಶುರು ಮಾಡಲಿಕ್ಕೆ ರಸ್ತೆ ನಿರ್ಮಾಣಕ್ಕೆ ಹಣವನ್ನು ಇಟ್ಟಿಲ್ಲ. ೧೯೮೭-೮೮ರ ಬಜೆಟ್‌ನಲ್ಲಿ ರಸ್ತೆನಿರ್ಮಾಣಕ್ಕೂಸ್ಕರ ಹಣವನ್ನು ಇಟ್ಟಿದ್ದರೆ ಅಕ್ವಿಜಿಷನ್ ಕೆಲಸ ಮುಗಿದು ರಸ್ತೆ ನಿರ್ಮಾಣ ಮಾಡತಕ್ಕ ಕೆಲಸವನ್ನು ಮಾಡಬಹುದಾಗಿತ್ತು. ತಾತ್ಕಾಲಿಕ ಕೆಲಸ ಪ್ರಾರಂಭ ಮಾಡಲಿಕ್ಕೆ ಹಣವನ್ನು ಇಟ್ಟು ಕೂಡಲೇ ಕೆಲಸವನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಓಟ್ಟಾರೆ ರಸ್ತೆಯ ತೀವ್ರತೆ ಏನೆಂಬುದನ್ನು ಮಾನ್ಯ ಸದಸ್ಯರು ಸಭೆಯ ಮುಖಾಂತರ ಕ್ಷೇತ್ರದ ಜನತೆಯ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರ ಬಗ್ಗೆ ವಾದವಿವಾದ ಇಲ್ಲ. ಅಕ್ವಿಜಿಷನ್ ಪ್ರೊಸಿಡಿಂಗ್ಸ್ ಹೇಗೆ ಆಗುತ್ತದೆ ಎನ್ನುವುದು ತಮಗೆ ಗೊತ್ತಿದೆ. ಯಾರಾದರೂ ಒಬ್ಬರು ಕೋರ್ಟಿಗೆ ಹೋದರೆ ಮತ್ತೆ ಇದು ಡಿಲೇ ಆಗುತ್ತದೆ. ಅದನ್ನು ನಾನು ಆಗಲೇ ಹೇಳಿದ್ದೇನೆ. ರೈತರ ಮನವೊಲಿಸಲಿಕ್ಕೆ ಸದಸ್ಯರು ಪ್ರಯತ್ನ ಮಾಡಿದರೆ, ನಾನು ಬರುತ್ತೇನೆ. ಇದರ ಬಗ್ಗೆ ಇಷ್ಟು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಎಷ್ಟು ಜಾಗ್ರತೆ ಭೂಮಿ ಸಿಗುತ್ತದೆ ಅಷ್ಟು ಜಾಗ್ರತೆ ತಾತ್ಕಾಲಿಕ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಹಣಕಾಸಿನ ಬಗ್ಗೆ ಹೇಳುವುದಾದರೆ ಕಳೆದ ಸಲ ನಾವು ಹಣವನ್ನು ಇಟ್ಟಿದ್ದೆವು. ಒಂದು ರೂಪಾಯಿ ಕೂಡಾ ಖರ್ಚಾಗಲಿಲ್ಲ. ಈ ಸಾರಿ ಹಣವನ್ನು ಇಟ್ಟಿದ್ದೇವೆ. ಲ್ಯಾಂಡ್ ಅಕ್ವಿಜಿಷನ್ ಪ್ರಾಬ್ಲಮ್ಸ್ ಇದೆ. ಅದನ್ನು ರಾಜೀ ಪಂಚಾಯತಿ ಮುಖಾಂತರ ಮಾಡಿಕೊಡುವುದಾದರೆ ನಾವು ಟೋಕನ್ ಅಡ್ವಾನ್ಸ್ ಕೊಡುತ್ತೇವೆ. ಮಾನ್ಯ ಸದಸ್ಯರು ಸರ್ಕಾರಕ್ಕೆ ಸಹಕಾರ ಕೊಡುವುದಾದರೆ ಕೆಲಸ ಶುರು ಮಾಡುತ್ತೇವೆ. ಅಧಿವೇಶನ ಮುಗಿದ ಮೇಲೆ ನಾವು ನೀವು ಎಲ್ಲಾ ಸೇರಿ ಆ ಬಗ್ಗೆ ಪ್ರಯತ್ನ ಮಾಡೋಣ.

ಬೆಂಗಳೂರು ಮೈಸೂರು ನಡುವಣ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಪರಿವರ್ತಿಸುವುದು.

೮೦೦. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು, ಮೈಸೂರು ನಡುವಣ ವಾಹನಗಳ ಸಂಚಾರ ಅತಿಯಾಗಿರುವ ಕಾರಣ, ಆಗಾಗ್ಗೆ ಸಂಭವಿಸುವ ಅಪಘಾತಗಳನ್ನು ತಪ್ಪಿಸಲು ಕ್ಷಿಪ್ರ ಸಂಚಾರವೇರ್ಪಡುವ ಸಲುವಾಗಿ ಈ ಮಾರ್ಗವನ್ನು "ಎಕ್ಸ್‌ಪ್ರೆಸ್ ಮಾರ್ಗ"ವಾಗಿ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ.

ಆ) ಆ ರೀತಿ ಕಾರ್ಯ ಜರುಗಿಸದಿರಲು ಅಡಚಣೆಯೇನಾದರೂ ಇದೆಯೆ ;

ಇ) ಆ ಮಾರ್ಗ ನಿರ್ಮಾಣದ ಕಾರ್ಯ ಎಂದು ಪ್ರಾರಂಭವಾಗುವುದು?